# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 984 |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11-03-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ತುಮಕೂರು – ಶಿವಮೊಗ್ಗ ಚತುಷ್ಪಥ ಹೆದ್ದಾರಿ ಕಾಮಗಾರಿ ಯಾವಾಗ ಪ್ರಾರಂಭವಾಯಿತು; ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣವೇನು; | ತುಮಕೂರು – ಶಿವಮೊಗ್ಗ ಚತುಷ್ಪಥ ಹೆದ್ದಾರಿ ಕಾಮಗಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರ ವ್ಯಾಪ್ತಿಗೆ ಒಳಪಡುತ್ತದೆ. ಸದರಿಯವರು ವರದಿಸಿರುವಂತೆ ಕಾಮಗಾರಿಯ ವಿವರ ಹಾಗೂ ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ. |
| ಆ | ಈ ಕಾಮಗಾರಿಗೆ ಕೇಂದ್ರ ಸರ್ಕಾರದ ಪಾಲು ಎಷ್ಟು; ಹಾಗೂ ರಾಜ್ಯ ಸರ್ಕಾರದ ಪಾಲು ಎಷ್ಟು; | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ವರದಿಸಿರುವಂತೆ ಶೇ.100 ರಷ್ಟು ಪಾಲು ಕೇಂದ್ರ ಸರ್ಕಾರದ್ದೇ ಆಗಿರುತ್ತದೆ. |
| ಇ | ಈ ಯೋಜನೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆಯೇ ಅಥವಾ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಬಾಕಿ ಇದೆಯೇ; | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಗಳು, ತುಮಕೂರು ರವರರಿಗೆ ಸಂಬಂಧಿಸಿದ ಪ್ಯಾಕೇಜ್–1 ಹಾಗೂ ಪ್ಯಾಕೇಜ್–2 ರ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ ಎಂದು ವರದಿಸಿರುತ್ತಾರೆ.<br><br>ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಗಳು, ಶಿವಮೊಗ್ಗ ರವರಿಗೆ ಸಂಬಂಧಿಸಿದ ಪ್ಯಾಕೇಜ್–3 ಮತ್ತು ಪ್ಯಾಕೇಜ್–4 ರ ಕುರಿತು ಈ ಕೆಳಗಿನಂತೆ ವರದಿಸಿರುತ್ತಾರೆ:<br><br>ಪ್ಯಾಕೇಜ್–3 ರಡಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ 23 ಗ್ರಾಮಗಳು ಹಾಗೂ ತರೀಕೆರೆ ತಾಲ್ಲೂಕಿನ 9 ಗ್ರಾಮಗಳು ಒಟ್ಟು 302.25 ಹೆಕ್ಟೇರ್ ಪ್ರದೇಶವು ಭೂಸ್ವಾಧೀನ ಗೊಂಡಿದ್ದು, ಪೂರ್ಣ ಪ್ರದೇಶಕ್ಕೆ 3ಜಿ ಅವಾರ್ಡ್ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ.<br><br>ಪ್ಯಾಕೇಜ್–4 ರಡಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ 17 ಗ್ರಾಮಗಳು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ 10 ಗ್ರಾಮಗಳು ಮತ್ತು ಶಿವಮೊಗ್ಗ ತಾಲ್ಲೂಕಿನ 11 ಗ್ರಾಮಗಳು ಒಟ್ಟು 330.45 ಹೆಕ್ಟೇರ್ ಪ್ರದೇಶವು ಭೂಸ್ವಾಧೀನಗೊಂಡಿದ್ದು, 330.3488 ಹೆಕ್ಟೇರ್ ಪ್ರದೇಶಕ್ಕೆ 3ಜಿ ಅವಾರ್ಡ್ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ಉಳಿಕೆ 0.1012 ಹೆಕ್ಟೇರ್ ಪ್ರದೇಶಕ್ಕೆ ಅವಾರ್ಡ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಈ</td><td>ಈಗಾಗಲೇ ಭೂಸ್ವಾಧೀನ ಪಡಿಸಿಕೊಂಡಿರುವ ರೈತರಿಗೆ ನೀಡಿರುವ ಪರಿಹಾರ ಹಣದ ಮೊತ್ತವೆಷ್ಟು; ಇನ್ನೂ ಬಾಕಿ ನೀಡಬೇಕಾದ ಪರಿಹಾರದ ಮೊತ್ತ ಎಷ್ಟು;</td><td>ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಗಳು, ತುಮಕೂರು ರವರರಿಗೆ ಸಂಬಂಧಿಸಿದ ಪ್ಯಾಕೇಜ್–1 ಹಾಗೂ ಪ್ಯಾಕೇಜ್–2 ರ ಭೂಸ್ವಾಧೀನಪಡಿಸಿಕೊಂಡಿರುವ ರೈತರಿಗೆ ನೀಡಿರುವ ಪರಿಹಾರದ ಮೊತ್ತದ ವಿವರಗಳನ್ನು ಈ ಕೆಳಗಿನಂತೆ ವರದಿಸಿರುತ್ತಾರೆ:<br>
<ul>
<li>ಪ್ಯಾಕೇಜ್–1 ರಲ್ಲಿ ರೂ.452.30 ಕೋಟಿಗಳ ಪರಿಹಾರದ ಮೊತ್ತವು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಬಿಡುಗಡೆಯಾಗಿದ್ದು, ಈಗಾಗಲೇ ಪೂರ್ಣ ಪರಿಹಾರದ ಮೊತ್ತವನ್ನು ಖಾತೆದಾರರಿಗೆ ಪಾವತಿ ಮಾಡಲಾಗಿದೆ.</li>
<li>ಪ್ಯಾಕೇಜ್–2 ರಲ್ಲಿ ರೂ.329.25 ಕೋಟಿಗಳ ಪರಿಹಾರದ ಮೊತ್ತವು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಬಿಡುಗಡೆಯಾಗಿದ್ದು, ರೂ.329.08 ಕೋಟಿಗಳನ್ನು ವಿತರಿಸಲಾಗಿದ್ದು ಬಾಕಿ ರೂ.0.17 ಕೋಟಿಗಳನ್ನು ವಿತರಣೆ ಪ್ರಗತಿಯಲ್ಲಿರುತ್ತದೆ. ಹಾಗೂ</li>
</ul>
ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಗಳು, ಶಿವಮೊಗ್ಗ ರವರಿಗೆ ಸಂಬಂಧಿಸಿದ ಪ್ಯಾಕೇಜ್–3 ಹಾಗೂ ಪ್ಯಾಕೇಜ್–4 ರ ಭೂಸ್ವಾಧೀನಪಡಿಸಿಕೊಂಡಿರುವ ರೈತರಿಗೆ ನೀಡಿರುವ ಪರಿಹಾರದ ಮೊತ್ತದ ವಿವರಗಳು ಈ ಕೆಳಗಿನಂತೆ ವರದಿಸಿರುತ್ತಾರೆ:<br>
<ul>
<li>ಪ್ಯಾಕೇಜ್–3 ರಡಿ ದಿನಾಂಕ: 28.02.2026 ರವರೆಗೆ ಒಟ್ಟು ರೂ.435.97 ಕೋಟಿಗಳನ್ನು ವಿತರಿಸಲಾಗಿದ್ದು, ಉಳಿಕೆ ರೂ.2.62 ಕೋಟಿಗಳ ಪರಿಹಾರ ವಿತರಣೆ ಪ್ರಗತಿಯಲ್ಲಿರುತ್ತದೆ.</li>
<li>ಪ್ಯಾಕೇಜ್–4 ರಡಿ ದಿನಾಂಕ: 28.02.2026 ರವರೆಗೆ ಒಟ್ಟು ರೂ. 958.27 ಕೋಟಿಗಳನ್ನು ವಿತರಿಸಲಾಗಿದ್ದು, ಉಳಿಕೆ ರೂ.9.33 ಕೋಟಿಗಳ ಪರಿಹಾರ ವಿತರಣೆ ಪ್ರಗತಿಯಲ್ಲಿರುತ್ತದೆ.</li>
</ul></td></tr>
<tr><td>ಉ</td><td>ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಧಿ ಎಷ್ಟು?</td><td>ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ವರದಿಸಿರುವಂತೆ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಧಿಯ ವಿವರ ಈ ಕೆಳಕಂಡಂತಿದೆ.
<table>
<tr><th>ಕಾಮಗಾರಿ</th><th>ಸಂಭವನೀಯ ಮುಕ್ತಾಯಗೊಳ್ಳುವ ದಿನಾಂಕ</th></tr>
<tr><td>Package-1</td><td>PCOD Issued</td></tr>
<tr><td>Package-2</td><td>30.06.2026</td></tr>
<tr><td>Package-3</td><td>30.04.2026</td></tr>
<tr><td>Package-4</td><td>31.03.2027</td></tr>
</table></td></tr>
</table>

ಸಂಖ್ಯೆ: ಲೋಇ 163 ಸಿಎನ್‌ಹೆಚ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಅನುಬಂಧ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 984

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಕಾಮಗಾರಿಯ ಮೊತ್ತ | ಒಟ್ಟು ಉದ್ದ (ಕಿ.ಮೀ ಗಳಲ್ಲಿ) | ಪೂರ್ಣಗೊಂಡ ಉದ್ದ (ಕಿ.ಮೀ ಗಳಲ್ಲಿ) | ಕಾಮಗಾರಿ ಪ್ರಾರಂಭಗೊಂಡ ದಿನಾಂಕ | ಸಂಭವನೀಯ ಮುಕ್ತಾಯಗೊಳ್ಳುವ ದಿನಾಂಕ | ಷರಾ |
|---|---|---|---|---|---|---|---|
| 1 | Four laning of Mallasandra to Karadi Section from Design Km 12+300 to Km 65+195 of NH-206 on HAM under Bharatmala Pariyojana in the state of Karnataka (Package-I)<br>**Concessionaire:-**<br>M/s. Ashoka Buildcon | 1364 | 50.64 | 50.56 | 15.10.2019 | PCOD issued | ಭೂಸ್ವಾಧೀನ ಪ್ರಕ್ರಿಯೆ ಸಮಸ್ಯೆ, ಸಾರ್ವಜನಿಕ ಪ್ರತಿಭಟನೆ ಹಾಗೂ ಗೌರವಾನ್ವಿತ ಹೈಕೋರ್ಟ್‌ನ ತಡೆಯಾಜ್ಞೆ ಇತ್ಯಾದಿಗಳಿಂದ ಕಾಮಗಾರಿಯ ಪ್ರಗತಿಯಲ್ಲಿ ವಿಳಂಬವಾಗಿತ್ತು ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 2 | Four laning of Karadi to Banavara section from Design Km 65+195 to Km 121+900 of NH-206 on HAM under Bharatmala Pariyojana in the state of Karnataka. (Package-II)<br>**Concessionaire:-**<br>M/s. Ashoka Buildcon | 1505 | 56.70 | 53.19 | 15.10.2019 | 30.06.2026 | ಕಾಮಗಾರಿಯು ಭೌತಿಕವಾಗಿ ಶೇ.95.67 ರಷ್ಟು ಪ್ರಗತಿಯನ್ನು ಸಾಧಿಸಿದ್ದು, ಒಟ್ಟು 56.705 ಕಿ.ಮೀ ಗಳಲ್ಲಿ, 53.19 ಕಿ.ಮೀ ರಸ್ತೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಬಾಕಿ ಉಳಿದ ರಸ್ತೆ ಕಾಮಗಾರಿಯು ಈ ಕೆಳಕಂಡ ಕಾರಣಗಳಿಂದಾಗಿ ವಿಳಂಬವಾಗಿರುತ್ತದೆ.<br>1. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (VJNL) ನಿಂದ ಕೆನಾಲ್ ಕ್ರಾಸಿಂಗ್ ಕಾಮಗಾರಿ ಪೂರ್ಣಗೊಳ್ಳುವಲ್ಲಿ ವಿಳಂಬವಾಗಿರುತ್ತದೆ. (ಒಟ್ಟು 100 ಮೀ.)<br>2. ಅಯನಭಾವಿಯಲ್ಲಿ ಅಂಡರ್ ಪಾಸ್ ಬೇಡಿಕೆಗೆ ಸಾರ್ವಜನಿಕರ ಬೇಡಿಕೆಯಿಂದಾಗಿ ವಿಳಂಬವಾಗಿರುತ್ತದೆ. (ಒಟ್ಟು 400 ಮೀ.)<br>3. ಕರಡಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆಯಿಂದ ವಿಳಂಬವಾಗಿರುತ್ತದೆ. ((ಒಟ್ಟು 225 ಮೀ.)<br>4. ಬೆಂಡಿಕೆರೆಯಲ್ಲಿ ಹೆಚ್ಚಿನ ಪರಿಹಾರಕ್ಕಾಗಿ ಸಾರ್ವಜನಿಕರ ಬೇಡಿಕೆಯಿಂದಾಗಿ ವಿಳಂಬವಾಗಿದ್ದು, ಸದರಿ ವಿಷಯವನ್ನು ದಿನಾಂಕ:10.02.2026 ರಂದು ಪರಿಹರಿಸಲಾಗಿದೆ. (ಒಟ್ಟು 3.0 ಕಿ.ಮೀ.) |

| | | | | | | | |
|---|---|---|---|---|---|---|---|
| 3 | Four laning of Banavara to Bettadahalli section from Design Km 121+900 to Km 170+415 of NH-206 on HAM under Bharatmala Pariyojana in the state of Karnataka. (Package-III)<br><br>**Concessionaire:-**<br><br>M/s. Ashoka Buildcon | 1444 | 48.51 | 46.38 | 15.03.2021 | 30.04.2026 | ಕಾಮಗಾರಿಯು ಭೌತಿಕವಾಗಿ ಶೇ.96.63 ರಷ್ಟು ಪ್ರಗತಿಯನ್ನು ಸಾಧಿಸಿದ್ದು, ಒಟ್ಟು 48.515 ಕಿ.ಮೀ ಗಳಲ್ಲಿ, 46.38 ಕಿ.ಮೀ ರಸ್ತೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಬಾಕಿ ಉಳಿದ ರಸ್ತೆ ಕಾಮಗಾರಿಯು ಈ ಕೆಳಕಂಡ ಕಾರಣಗಳಿಂದಾಗಿ ವಿಳಂಬವಾಗಿರುತ್ತದೆ.<br>1. ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗಿರುವುದರಿಂದ.<br>2. ರೈಲ್ವೆಯಿಂದ ಆರ.ಓ.ಬಿ. Girder launching ಗೆ ಅನುಮತಿ ನೀಡುವಲ್ಲಿ ವಿಳಂಬವಾಗಿದ್ದು, ಸದರಿ ವಿಷಯವನ್ನು ದಿನಾಂಕ:24.02.2026 ರಂದು ಪರಿಹರಿಸಲಾಗಿದೆ.<br>3. ಪುಂಡನಹಳ್ಳಿ ಸರೋವರ ಸ್ಥಳದಲ್ಲಿ ಸಾರ್ವಜನಿಕರ ಪ್ರತಿರೋಧದಿಂದಾಗಿ ಕಾಮಗಾರಿಯಲ್ಲಿ ವಿಳಂಬವಾಗಿರುತ್ತದೆ. |
| 4 | Four laning of Bettadahalli- Shivamogga section from Km.170.415 to km. 226.750 of NH-206 (Package -IV)<br><br>**Concessionaire:-**<br><br>M/s. Ashoka Buildcon | 2083 | 50.97 | 43.77 | 20.10.2021 | 31.03.2027 | ಕಾಮಗಾರಿಯು ಭೌತಿಕವಾಗಿ ಶೇ.81.14 ರಷ್ಟು ಪ್ರಗತಿಯನ್ನು ಸಾಧಿಸಿದ್ದು, ಒಟ್ಟು 50.975 ಕಿ.ಮೀ ಗಳಲ್ಲಿ, 43.77 ಕಿ.ಮೀ ರಸ್ತೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಬಾಕಿ ಉಳಿದ ರಸ್ತೆ ಕಾಮಗಾರಿಯು ಈ ಕೆಳಕಂಡ ಕಾರಣಗಳಿಂದಾಗಿ ವಿಳಂಬವಾಗಿರುತ್ತದೆ.<br>1. ಭೂಸ್ವಾಧೀನ ಪ್ರಕ್ರಿಯ ವಿಳಂಬವಾಗಿರುವುದರಿಂದ.<br>2. ಶ್ರೀಗಂಧದ ಗಿಡಗಳನ್ನು ಕಡಿಯಲು ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ವಿಳಂಬವಾಗಿದೆ. (13.01.2026 ರಂದು DCF ಭದ್ರಾವತಿ ರವರಿಂದ ಸದರಿ ಗಿಡಗಳನ್ನು ಕಟಾವು ಮಾಡಲು ಅನುಮತಿ ದೊರೆತಿದ್ದು, ದಿನಾಂಕ 28.02.2026 ರಂದು ಒಟ್ಟು 2148 ಗಿಡಗಳನ್ನು ಕಟಾವು ಮಾಡಲಾಗಿರುತ್ತದೆ)<br>3. EHT ಟವರ್ ಸ್ಥಳಾಂತರಕ್ಕಾಗಿ ಭೂ ಪರಿಹಾರವನ್ನು ಅಂತಿಮಗೊಳಿಸುವಲ್ಲಿ ವಿಳಂಬವಾಗಿರುತ್ತದೆ.<br>4.ಪ್ರಸ್ತುತ 0.8 ಕಿ,ಮೀ ಉದ್ದದ ರಸ್ತೆಯನ್ನು ತೆರವುಗೊಳಿಸಬೇಕಾಗಿದೆ. |